**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಕುಮಟಾ</u>**

**ಸಿ.ಸಿ.ನಂ.632/2024**

ಸಿ.ಡಬ್ಲ್ಯು 24

ಪಿ.ಡಬ್ಲ್ಯು 09

ಸಾಕ್ಷಿದಾರರ ಹೆಸರು - **ಸುಧಾ ತಿಪ್ಪಾ ಅಘನಾಶಿನಿ**

ತಂದೆಯ ಹೆಸರು - **ತಿಪ್ಪಾ ಅಘನಾಶಿನಿ**

ವಯಸ್ಸು - 50 ವರ್ಷ

ಉದ್ಯೋಗ - **ಪೊಲೀಸ ಉಪ ನಿರೀಕ್ಷಕರು, ಕಾರವಾರ ಶಹರ ಪೊಲೀಸ ಠಾಣೆ**

ವಾಸ್ತವ್ಯ - ಕಾರವಾರ

(ಇಂದು ದಿನಾಂಕಃ 24-**01-2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ದಿಃ 13-08-2021 ರಿಂದ ದಿಃ 31-07-2024 ರವರೆಗೆ ಪೊಲೀಸ್ ಉಪ-ನಿರೀಕ್ಷಕಳಾಗಿ ಗೋಕರ್ಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 25/11/2023 ರಂದು ಚಾಸಾ 1 ರವರು ಠಾಣೆಯಲ್ಲಿ ಇದ್ದಾಗ, ಗೋಕರ್ಣದ ಬಂಗ್ಲೆ ಗುಡ್ಡದ ಸಮೀಪ ಕಾಮತ್ ಫಾರ್ಮ ಹೌಸ್‌ನಲ್ಲಿ ಇರುವ ಕಾಟೇಜನಲ್ಲಿ ಮಹಿಳೆಯರನ್ನು ಇಟ್ಟುಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದಾರೆ ಎಂಬ ಬಾತ್ಮಿ ಬಂದಿದ್ದು, ಅವರನ್ನು ನನ್ನನ್ನು ಹಾಗೂ ಇತರ ಸಿಬ್ಬಂದಿಗಳೊಂದಿಗೆ ಸರಕಾರಿ ವಾಹನ ಸಂಖ್ಯೆ ಕೆಎ 30 ಜಿ 0536 ನೇದ್ದರ ಮೇಲಾಗಿ ಬಂಗ್ಲೆಗುಡ್ಡ ಹಳೇ ಐಬಿ ರಸ್ತೆ ಅಲ್ಲಿಂದ ಕಾಮತ್ ಫಾರ್ಮ ಹೌಸಗೆ ಹೋಗಿ ಬಾತ್ಮಿ ಬಂದ

ಮೇರೆಗೆ ಅವರು ನಮ್ಮ ಜೀಪನ್ನು ನೋಡಿ ಓಡಲು ಪ್ರಾರಂಭಿಸಿರುತ್ತಾರೆ. ನಂತರ ಚಾಸಾ 1 ಹಾಗೂ 12 ರವರು ಹೋಗಿ ಒಬ್ಬ ವ್ಯಕ್ತಿಯನ್ನು ಹಿಡಿದು ಅವರನ್ನು ವಿಚಾರಿಸಿದ್ದು ಆತನ ಹೆಸರು ರಫಿಉಲ್ಲಾ ಎಂದು ತಿಳಿಸಿರುತ್ತಾರೆ.

ನಂತರ ಚಾಸಾ 11 ರವರು ಒಬ್ಬ ವ್ಯಕ್ತಿಯನ್ನು ಹಿಡಿದಿದ್ದು ಆತನ ಹೆಸರು ವಿಳಾಸ ವನ್ನು ಕೇಳಿದಾಗ ಸಚಿನ ಎಂದು ತಿಳಿಸಿರುತ್ತಾರೆ. ನಾನು ಓಡಿ ಹೋಗಿ ಒಂದು ಹೆಂಗಸನ್ನು ಹಿಡಿದುಕೊಂಡು ಆಕೆಯನ್ನು ವಿಚಾರಿಸಿದಾಗ ಆಕೆಯ ಹೆಸರು ಹರ್ಷಿದಾಬಾನು, ಚಿತ್ರದುರ್ಗಾ ಎಂದು ತಿಳಿಸಿರುತ್ತಾರೆ. ನಂತರ ಅವರೊಂದಿಗೆ 1ನೇ ಕಾಟೇಜನಲ್ಲಿ ಇದ್ದ ಚಾಸಾ 4 ಚಾಸಾ 7 ರವರೊಂದಿಗೆ ಸಿಕ್ಕಿರುತ್ತಾರೆ. ಆಕೆಯನ್ನು ವಿಚಾರಿಸಲಾಗಿ ನಾನು ರಾತ್ರಿ 01–00 ಗಂಟೆಗೆ 1 ಹಾಗೂ 2ನೇ ಆರೋಪಿತರು ತಿಳಿಸಿದಂತೆ ಬಂದಿರುತ್ತೇನೆ ಎಂದು ತಿಳಿಸಿರುತ್ತಾರೆ. ಅಲ್ಲಿ ನಮಗೆ ಸ್ವಲ್ಪ ಹಣ ಹಾಗೂ ಎಮ್.ಓ.2 ಸಿಕ್ಕಿರುತ್ತದೆ.

2ನೇ ಕಾಟೇಜಗೆ ಹೋಗಿ ಚಾಸಾ 5 ರವರು ಚಾಸಾ 7 ರವರೊಂದಿಗೆ ಆಕೆಯನ್ನು ವಿಚಾರಿದಾಗ 1 ಹಾಗೂ 2ನೇ ಆರೋಪಿತರ ಕೋರಿಕೆಯ ಮೇರೆಗೆ ತಾನು ಅಲ್ಲಿಗೆ ಬಂದಿರುವುದಾಗಿ ತಾನು ಹೇಳಿರುತ್ತಾರೆ. ಆಕೆಯ ಬಳಿ ಸ್ವಲ್ಪ ಹಣ ಹಾಗೂ ಮು.ಮಾ 2 ಸಿಕ್ಕಿರುತ್ತದೆ.

ಪಕ್ಕದ ಕಾಟೇಜಗೆ ಹೋಗಿ ಚಾಸಾ 6 ರವರು ಇದ್ದು ಆಕೆಯನ್ನು ವಿಚಾರಿದಾಗ 1 ಹಾಗೂ 2ನೇ ಆರೋಪಿತರು ನನ್ನನ್ನು ವೇಶ್ಯಾವಾಟಿಕೆಗಾಗಿ ಕರೆದುಕೊಂಡು ಬಂದಿದ್ದು, ಒಂದು ಗಿರಾಕಿಯು ಬಂದು ಹೋಗಿದ್ದು, 2ನೇ ಗಿರಾಕಿಗಾಗಿ ತಾನು ಕಾಯುತ್ತಿರುವುದಾಗಿ ತಿಳಿಸಿರುತ್ತಾರೆ. ಅವರಿಂದ ಬಂದ ಹಣವನ್ನು 2ನೆ ಆರೋಪಿತಳಿಗೆ ನೀಡಿರುವುದಾಗಿ ತಿಳಿಸಿರುತ್ತಾರೆ.

ನಂತರ ಚಾಸಾ 1 ರವರು ಘಟನಾ ಸ್ಥಳದಲ್ಲಿ ವಶಪಡಿಸಿಕೊಂಡ ವಸ್ತುಗಳೊಂದಿಗೆ ಹಾಗೂ ಪಂಚನಾಮೆ ಹಾಗೂ ಆರೋಪಿತರೊಂದಿಗೆ ಠಾಣೆಗೆ ಬಂದು ಸರಕಾರದ ಪರವಾಗಿ ದೂರನ್ನು ನೀಡಿರುತ್ತಾರೆ. ಸಾಕ್ಷಿಯು **ನಿ.ಪಿ.1** ರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು **ನಿ.ಪಿ.1.ಎಫ್** ಎಂದು ಗುರುತಿಸಿರುತ್ತಾರೆ. **ನಿ.ಪಿ.3** ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಚಾಸಾ 23 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ, ದಾಳಿಯ ಕಾಲಕ್ಕೆ ಸಿಕ್ಕಿದಂತಹ ಚಾಸಾ 4 ರಿಂದ 6 ರವರನ್ನು ಅವರ ಹೇಳಿಕೆಯನ್ನು ಪಡೆದುಕೊಂಡು ಅವರನ್ನು ಸ್ವೀಕಾರ ಕೇಂದ್ರಕ್ಕೆ ಕಳುಹಿಸಿರುತ್ತೇನೆ.

ದಾಳಿಯ ಕಾಲಕ್ಕೆ ಸಿಕ್ಕ 2ನೇ ಆರೋಪಿತಳ ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡು ಆಕೆಗೆ ಒಂದೂವರೆ ವರ್ಷದ ಮಗು ಇರುವ ಕಾರಣ ಆಕೆಗೆ ಸಿಆರ್ ಪಿ ಸಿ ಕಲಂ 41 ರ ಅನ್ವಯ ನೋಟೀಸನ್ನು ನೀಡಿ ತನಿಖೆಗೆ ಸಹಕರಿಸುವಂತೆ ತಿಳಿಸಿ ಬಾಂಡ ಮೇಲೆ ಬಿಟ್ಟಿರುತ್ತೇನೆ.

ವಶಕ್ಕೆ ಪಡೆದ 1 ಹಾಗೂ 3ನೇ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತೇನೆ. ದಿನಾಂಕಃ 28/11/2023 ರಂದು ಡಿ ಎಸ್ ಪಿ ಭಟ್ಕಳ ಇವರಿಂದ ಜ್ಞಾಪನಾ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 25 ರವರಿಗೆ ನೀಡಿರುತ್ತೇನೆ. ನಾನು ದಾಳಿಯಲ್ಲಿ ಭಾಗವಹಿಸಿದ ಕುರಿತಾಗಿ ಚಾಸಾ 25 ರವರೊಂದಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ದಿನಾಂಕಃ 27/11/2023 ರಂದು ಚಾಸಾ 4 ರಿಂದ 6 ರವರನ್ನು ಸ್ವೀಕಾರ ಕೇಂದ್ರದಿಂದ ಕರೆದುಕೊಂಡು ಬಂದು ನ್ಯಾಯಾಧೀಶರ ಮುಂದೆ ಕಲಂ 164 ದಾಖಲಿಸಿಕೊಳ್ಳುವ ಕುರಿತು ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ. 1 ರಿಂದ 3 ನೇ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು, ವಿನಾಯಿತಿ ಅರ್ಜಿ ಸಲ್ಲಿಸಲಾಗಿದ್ದು, ಸದರಿ ಆರೋಪಿತರ ಗುರುತಿಸುವಿಕೆಗೆ ಸಂಬಂಧಪಟ್ಟಂತೆ ತಕರಾರು ಇಲ್ಲವೆಂದು ಅವರ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲು –ಆರೋಪಿ ಪರ ಶ್ರೀ. ಎಸ್.ಜೆ.ಎನ್. ವಕೀಲರಿಂದ**

ನಾನು ಘಟನೆ ನಡೆದಿದೆ ಎನ್ನಲಾದ ದಿನ ಠಾಣೆಯಲ್ಲಿ ಇದ್ದೇನು ಎನ್ನುವ ಕುರಿತಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಉಳಿದ ಸಿಬ್ಬಂದಿಗಳು ಕೂಡ ದಾಳಿಯಲ್ಲಿ ಭಾಗವಹಿಸಿದ ಕುರಿತಾಗಿ ನಮ್ಮ ಠಾಣಾ ದಿನಚರಿಯಲ್ಲಿ ನಮೂದು ಇರುತ್ತದೆ. ಸದ್ರಿ ದಾಖಲಾತಿಗಳನ್ನು ನನ್ನ ತನಿಖೆಯ ಸಂದರ್ಭದಲ್ಲಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಠಾಣಾ ಜೀಪಿನ ಚಲನ ವಲನಗಳ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

ಕಾಮತ್ ಫಾರ್ಮ ಹೌಸ್‌ಗೆ ಹೋಗಲು ಎರಡು ಮೂರು ಕಡೆಯಿಂದ ದಾರಿ ಇದೆ. ಕಾಮತ್ ಫಾರ್ಮ ಹೌಸ್ ಗೆ ಹೋಗಲು ನಮ್ಮ ಠಾಣೆಯಿಂದ ಅರ್ಧ ಫರ್ಲಾಂಗ ದೂರ ಇದೆ. ಚಾಸಾ 1 ರವರು ನನಗೆ ಮಾಹಿತಿಯನ್ನು ತಿಳಿಸಿದ ಕುರಿತಾಗಿ ನನ್ನ ಡೈರಿಯಲ್ಲಿ ನಮೂದಿಸಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾವು ನಮ್ಮ ಠಾಣೆಯಿಂದ ಐ.ಬಿ. ಮಾರ್ಗವಾಗಿ ಕಾಮತ್ ಫಾರ್ಮ ಹೌಸ್‌ಗೆ ಹೋಗಿರುತ್ತೇವೆ. ನಾವು ಜೀಪನಲ್ಲಿ ಹೋಗಿದ್ದು ಕೆಲವು ಸಿಬ್ಬಂದಿಗಳು ಬೈಕನಲ್ಲಿ ಬಂದಿರುತ್ತಾರೆ. ನಾವು ಘಟನಾ ಸ್ಥಳದಲ್ಲಿ ದೂರದಲ್ಲಿ ನಿಂತು ವಾಚ್ ಮಾಡಿ ನೋಡಿರುತ್ತೇವೆ. ನಾವು ಕಾಟೇಜದಿಂದ 100 ಮೀಟರ ದೂರದಲ್ಲಿ ಪೂರ್ವ ದಿಕ್ಕಿನಲ್ಲಿ ನಿಂತು 10 ನಿಮಿಷಗಳ ಕಾಲ ವಾಚ್ ಮಾಡಿರುತ್ತೇವೆ.

ಸದ್ರಿ ಸಂದರ್ಭದಲ್ಲಿ ಆ ಕಾಟೇಜಗೆ ಯಾರು ಬಂದು ಹೋಗಿರುತ್ತಾರೆ ಎಂಬ ಬಗ್ಗೆ ನಾನು ನೋಡಿರುವುದಿಲ್ಲ. ಅದರಂತೆ ವಾಚ್ ಮಾಡಿದ ವಿಷಯವನ್ನು ನನ್ನ ಹೇಳಿಕೆಯಲ್ಲಿ ಬರೆದಿಲ್ಲ ಎಂದರೆ ಸರಿ. ವಾಚ್ ಮಾಡಿದ ಸಮಯದಲ್ಲಿ ಚಾಸಾ 4 ರಿಂದ 9 ರವರು ಲೈಂಗಿಕ ಕ್ರಿಯೇಯಲ್ಲಿ ತೊಡಗಿರುವ ಕುರಿತಾಗಿ ನಾನು ನೋಡಿರುವುದಿಲ್ಲ. ಚಾಸಾ 4 ರಿಂದ 6 ರವರು ಆರೊಪಿತರಿಗೆ ಹಣವನ್ನು ನೀಡಿದ ಕುರಿತಾಗಿ ನಾನು ನೋಡಿರುವುದಿಲ್ಲ.

ಚಾಸಾ 7 ರಿಂದ 9 ರವರು ಘಟನಾ ಸ್ಥ.ಳಕ್ಕೆ ಎಷ್ಟು ಹಣವನ್ನು ತಂದಿದ್ದರು ಎಂಬ ಬಗ್ಗೆ ನಾನು ವಿಚಾರಿಸಿಸಿರುವುದಿಲ್ಲ. ಸದ್ರಿ ನೋಟುಗಳು ಯಾವ ಮುಖ ಬೆಲೆಯ ನೋಟುಗಳು ಎಂದು ಹೇಳಲು ಬರುವುದಿಲ್ಲ. 2ನೇ ಅರೋಪಿತಳು ಪಶ್ಚಿಮ ದಿಕ್ಕಿಗೆ ಎಷ್ಟು ದೂರ ಓಡಿ ಹೋಗಿದ್ದಾಳೆ ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು 100 ಮೀಟರ ಅಂತರ ಓಡಿ ಹೋಗಿರುತ್ತಾರೆ. ಆರೋಪಿತರು ಹಾಗೂ ಸಂತ್ರಸ್ಥರು ಘಟನಾ ದಿನದಂದು ಯಾವ ರೀತಿಯ ಬಟ್ಟೆಯನ್ನು ಧರಿಸಿದ್ದರು ಎಂಬ ಬಗ್ಗೆ ನೆನಪಿದೆಯಾ ಎಂದರೆ ಸಾಕ್ಷಿಯು ನನಗೆ ಬಣ್ಣವು ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ.

ಸದ್ರಿ ಕಾಟೇಜಗೆ ಯಾವುದೇ ನಂಬರಗಳು ಇರುವುದಿಲ್ಲ. ಸದ್ರಿ ಕಾಟೇಜಗಳು ಎಷ್ಟು ದೂರದಲ್ಲಿ ಇದ್ದವು ಎಂದರೆ ಸಾಕ್ಷಿಯು ಅಕ್ಕಪಕ್ಕದಲ್ಲಿ ಇದ್ದವು ಎಂದು ನುಡಿಯುತ್ತಾರೆ. ನನಗೆ ಸರಿಯಾದ ದೂರದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಸದ್ರಿ ಕಾಟೇಜಗಳು ಎಷ್ಟು ದೂರದಲ್ಲಿ ಇದ್ದವು ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ತನಿಖೆಯ ಕಾಲಕ್ಕೆ ನಮ್ಮ ಅಂಗಜಪ್ತಿ ಮಾಡಿಕೊಂಡ ಯಾದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮು.ಮಾ.2 ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ 1 ಎಲ್ಲರ ಬಳಿ ಇರುತ್ತದೆ ಎಂದರೆ ಸರಿ. ನಿಪಿ3 ರಲ್ಲಿ ನಮ್ಮ ವಾಹನ ಹಾಗೂ ಸಿಬ್ಬಂದಿಗಳ ವಾಹನವು

ಕಾಣುವುದಿಲ್ಲ ಎಂದರೆ ಸಾಕ್ಷಿಯು ನಾವು ಘಟನಾ ಸ್ಥಳದಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ3 ನ್ನು ನಾವು ಈ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ3 ನ್ನು ಇಟ್ಟುಕೊಂಡು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಹೋಗಲಿಲ್ಲ ಎಂದರೆ ಸರಿಯಲ್ಲ. ನಿಪಿ3 ರ ಸ್ಥಳವು ಕಾಮತ್ ಫಾರ್ಮ ಹೌಸಗೆ ಸಂಬಂಧಿಸಿದ ಸ್ಥಳ ಅಲ್ಲ ಎಂದರೆ ಸರಿಯಲ್ಲ.

ಚಾಸಾ 7 ರಿಂದ 10 ರವರು ನಮಗೆ ಘಟನಾ ಸ್ಥಳದಲ್ಲಿ ಸಿಗಲಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರಿಂದ 6 ರವರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಚಾಸಾ 1 ಹಾಗೂ 25 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಅವರು ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಳಿಯ ಕಾಲದಲ್ಲಿ ಚಾಸಾ 1ರವರಿಗೆ ಸಾಹಯ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖೆಯನ್ನು ಮಾಡಲಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರಿಂದ 7 ರವರು ಹೇಳಿಕೆಯನ್ನು ಪಡೆಯಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಂದೆ ಯಾವುದೇ ಪಂಚನಾಮೆಯನ್ನು ಮಾಡಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆಯಲಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಹಾಗೂ 25 ರವರು ನನ್ನ ಮೇಲಾಧಿಕಾರಿಗಳು ಆಗಿರುವುದರಿಂದ ಅವರ ಪ್ರಭಾವಕ್ಕೆ ಒಳಗಾಗಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಮುದ್ದೇಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾಳಿಗೆ ಹೋಗಿದೆ ಎನ್ನಲಾದ ಸಂದರ್ಭದಲ್ಲಿ ಘಟನಾ ಸ್ಥ,ಳದಲ್ಲಿನ ರಜಿಸ್ಟರಗಳನ್ನು ನಾನು ಪಡೆದುಕೊಂಡಿರುವುದಿಲ್ಲ ಹಾಗೂ ಚಾ.ಸಾ. 1 ರವರು ಪಡೆದುಕೊಂಡಿರುವುದನ್ನು

ನೋಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅವರು ಕೇಳುತ್ತಿರುವುದನ್ನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾವು ದಾಳಿಯಲ್ಲಿ ಹೋಗಿದ್ದೇವೆ ಎನ್ನಲಾದ ಸಂದರ್ಭದಲ್ಲಿ ಕಾಮತ್ ಫಾರ್ಮ ಹೌಸ್ ಎಂಬ ನಾಮಫಲಕದ ಮುಂದೆ ಯಾವುದೇ ಭಾವಚಿತ್ರವನ್ನು ತೆಗೆದಿರುವುದಿಲ್ಲ. ದಾಳಿಗೆ ಹೋಗಿದೆ ಎನ್ನಲಾದ ಸಂದರ್ಭದಲ್ಲಿ ಕಾಮತ್ ಫಾರ್ಮ ಹೌಸ್ ಎಂಬ ನಾಮಫಲಕದೊಂದಿಗೆ ಸದ್ರಿ ಫಾರ್ಮ ಹೌಸ ಗೆ ಸಂಬಂಧಿಸಿದ ಮಾಲಕರು ಹಾಗೂ ನಡೆಸುತ್ತಿರುವ ವ್ಯಕ್ತಿಗಳ ಸಿಬ್ಬಂದಿಗಳ ಹೆಸರು ಹಾಗೂ ವಿವರ ಇರುವ ಫಲಕಗಳಾಗಲೀ ಇರಲಿಲ್ಲ.

ನಿಪಿ 3 ರಲ್ಲಿ ಇರುವಂತಹ ಕಟ್ಟಡಗಳು ಗೋಕರ್ಣದಲ್ಲಿ ಎಲ್ಲಾ ಕಡೆಗೂ ಇವೆ ಎಂದರೆ ಸರಿ. ದಾಳಿಗೆ ಹೋಗುವ ಪೂರ್ವದಲ್ಲಿ ದೂರುಗಳು ಬಂದಿಲ್ಲ ಎಂದರೆ ಸರಿ. ನಾನು ತನಿಖಾಧಿಕಾರಿಯಾಗಿ ಈ ಪ್ರಕರಣವನ್ನು ತೆಗೆದುಕೊಂಡ ಕೂಡಲೇ ಯಾವ ಕಲಂಗಳನ್ನು ಹಾಕಿದ್ದೇವೆ ಎಂಬ ಬಗ್ಗೆ ನನ್ನ ಗಮನದಲ್ಲಿ ಇತ್ತು ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವ ಸಂದರ್ಭದಲ್ಲಿ ಅಂತಿಮ ದೋಷಾರೋಪಣಾ ಪಟ್ಟಿಯಲ್ಲಿ ಫಿರ್ಯಾದಿಯಲ್ಲಿರುವ ಕಲಂಗಳ ಜೊತೆಗೆ ಹೆಚ್ಚುವರಿ ಅಥವಾ ಕಡಿಮೆ ಮಾಡಿದ ಕುರಿತಾಗಿ ನನಗೆ ಮಾಹಿತಿ ಇದೆ.

ಮೂಲ ಫಿರ್ಯಾದಿಯಲ್ಲಿ ಇರುವ ಹಲವಾರು ಕಲಂಗಳನ್ನು ತೆಗೆದು ಹಾಕಿದ್ದಾರೆ ಎಂದರೆ ಸರಿ. ರಾಜ್ಯದಲ್ಲಿನ ಯಾವುದೇ ಠಾಣೆಯಿಂದ ಮಹಿಳೆಯರು ನಾಪತ್ತೆಯಾದ ಬಗ್ಗೆ ನಮಗೆ ದೂರು ಬಂದಿರುವುದಿಲ್ಲ. ಕಾಟೇಜನ ಹತ್ತಿರ ಇರುವ ವ್ಯಕ್ತಿಗಳು ಕಾಟೇಜನಲ್ಲಿ ಯಾವುದೇ ಚೀರಾಟ ಹಾಗೂ ಕೂಗಾಟ ಆಗುತ್ತಿದ್ದ ಬಗ್ಗೆ ದೂರು ಬಂದಿರುವುದಿಲ್ಲ. ಚಾಸಾ 1 ರವರ ಆದೇಶದ ಮೇರೆಗೆ ನಾವು ದಾಳಿಗೆ ಹೋಗಿರುತ್ತೇವೆ.

ನಮ್ಮ ಫಿರ್ಯಾದಿಯಲ್ಲಿ ನಮೂದಿಸಿದ ಹಾಗೂ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದಂತಹ ಆರೋಪವನ್ನು ಆರೋಪಿತರು ಮಾಡಲಿಲ್ಲ ಎಂದರೆ ಸರಿಯಲ್ಲ. ಚಾಸಾ 1

ರವರು ನೀಡಿದ ಫಿರ್ಯಾದಿಯಲ್ಲಿ ನನ್ನ ಸಹಿ ಇರುತ್ತದೆ. ಚಾಸಾ 25 ರವರು ಯಾವ ಯಾವ ರೀತಿಯಾಗಿ ತನಿಖೆಯನ್ನು ಮಾಡಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಭಂಧಪಡದ ವ್ಯಕ್ತಿಯಗಳನ್ನು ಸೇರಿಸಿ ಠಾಣಾ ಅಂಕಿ ಸಂಖ್ಯೆಗಾಗಿ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ